'ನಿಜ ಅಮ್ಮಾ! ಅಪ್ಪನ ಮುಖ ನೋಡ್ತಿದ್ದರೆ ಭಾಳ ನೋವಾಗಿತ್ತು.'

'ಅಪ್ಪನಿಗೆ ಅದೆಷ್ಟು ಸಂತೋಷವಾಗಿದೆಯೋ' ಕನ್ನಡಿ ನೋಡುತ್ತಾ ಹಣೆಯ ಮೇಲೆ ತಿಲಕವನ್ನು ಸರಿಮಾಡಿಕೊಂಡಳು ಭಾರ್ಗವಿ.

ಮಳೆ ಹಾಗೆ ಬೀಳುತ್ತಿರುವಂತೆ ಹೊರಗಿನಿಂದ ಸದ್ದು ಕೇಳುತ್ತಿದೆ.

'ಅಮ್ಮಾ ಮನೆಗೆ ಬುಂಗೆ ಬಿದ್ದಂಗೈತೆ' ಸೀರೆ ಮೇಲೆ ಬಿದ್ದ ನಾಲ್ಕೈದು ಚುಕ್ಕೆ ಮಳೆ ಬೀಳುತ್ತಿದ್ದಂತೆ ದಡಗ್ಗನೇ ಎದ್ದಳು ಭಾರ್ಗವಿ. (ಬುಂಗೆ= ಮಣ್ಣಿನ ಮಾಳಿಗೆಗೆ ತೂತು ಬಿದ್ದು ಮನೆಯೊಳಗೆ ನೀರು ಸೋರುವುದು).

'ಆ ರೂಂನ್ಯಾಗ ನೋಡಿಬರ್ತೀನಿ ಇರಮ್ಮಾ. ಮಾಳಿಗೆಲ್ಲ ಹಂಗೆ ಇದೆ' ಎಂದು ಎದ್ದು ಬಡಬಡ ಕಾರ್ಯದ ಕೋಣೆಗೆ ಹೋದಳು. ಅಷ್ಟೊತ್ತಿಗೆ ಆ ಕೋಣೆ ಮೂರು ಕಡೆ ಸೋರುತ್ತಿದೆ. ಸರಿಯಾಗಿ ಮಂಚದ ಮೇಲೆ ಕೂಡ ಒಂದು ಬುಂಗೆಬಿದ್ದು ತೋಯುತ್ತಿದೆ.

'ಭಾಸ್ಕರೂ! ಜಲ್ದಿ ಇಲ್ಲಿ ಬಾ ಮಗನೇ' ದೊಡ್ಡ ಮಗನನ್ನು ಗಾಬರಿಯಿಂದ ಕರೆದಳು.

'ಏನಮ್ಮಾ?' ಇಬ್ಬರು ಮಕ್ಕಳು ಓಡೋಡಿಬಂದರು ಒಳಗಡೆ.

'ಎರಡ್ಮೂರು ಗಿಂಡಿ ತಗಂಬರ್ರಿ ಹೋಗ್ರಿ. ರೂಮೆಲ್ಲಾ ತಟಗು ಇಟ್ಟಿದೆ' ಹಾಸಿಗೆಯನ್ನು ಮಡಚುತ್ತಾ ಎಂದಳು.

ಭಾರ್ಗವಿ ಕೂಡ ಬಂದಳು. ಎಲ್ಲಿ ನೀರು ಸೋರುತ್ತಿದೆ. ಅದರ ಕೆಳಗೆ ಗಿಂಡಿಗಳಿಟ್ಟಿದ್ದರೂ ಮತ್ತೆ ಮೂರು ಕಡೆ ಸೋರಲಾರಂಭಿಸಿದೆ. ಮಂಚವನ್ನೆತ್ತಿಡಲೂ ಜಾಗವಿಲ್ಲ ಆ ಕೋಣೆಯಲ್ಲಿ.

'ಅರೆ ನಿಮ್ಮಪ್ಪನ್ನ ಒಳಗ ಕರಿರಲೋ' ಗಡಿಬಿಡಿ ಹೆಚ್ಚಾಯಿತಾಕೆಗೆ.

ಒಳಗೆ ಬಂದ ಅನಂತರೆಡ್ಡಿ ಪರಿಸ್ಥಿತಿಯನ್ನು ನೋಡಿದ. ಮಲಗಲು ಸಾಧ್ಯವಿಲ್ಲದಂತಿದೆ ಕೋಣೆ.

'ಮಾಳಿಗೆ ಮ್ಯಾಲೋಗಿ ನಾನು ನೋಡಿ ತುಳಿದು ಬರ್ತೀನಿ' ಎನ್ನುತ್ತಾ ಕಂಬಳಿ ಹೊದ್ದು ಬ್ಯಾಟರಿ ತೆಗೆದುಕೊಂಡು ಮೆಟ್ಟಿಲುಹತ್ತಿ ಹೋದ.

ಮಳೆಗೆ ತೋಯ್ದ ಸವುಳು ಮಾಳಿಗೆ ಮೇಲೆ ಜಾರುತ್ತಿದೆ. ಐದಾರು ನಿಮಿಷಕ್ಕಿಂತ ಹೆಚ್ಚು ಆ ಮಳೆಯಲ್ಲಿ ನಿಲ್ಲಲಾರದೆ ಮತ್ತೆ ಕೆಳಗಡೆ ಬಂದ. ಈಗ ಆ ಕೋಣೆಯಲ್ಲದೇ ಮಧ್ಯದ ಹಾಲ್, ಸಾಮಾನಿನ ಕೋಣೆ, ಅಡುಗೆಮನೆಗಳು ಕೂಡ ಸೋರುತ್ತಿವೆ.

ಭಾರ್ಗವಿ ಹೊರಗಡೆ ಬಂದು ರಾಜಶೇಖರನಿಗೆ ಒಳಗಿನ ಪರಿಸ್ಥಿತಿಯನ್ನು ಹೇಳುತ್ತಿದ್ದಾಳೆ. ಮಳೆ ನಿಂತರೆ ಕೂಡ ಇವತ್ತು ಮಲಗಿಕೊಳ್ಳಲು ಜಾಗವಿಲ್ಲ. ಮಳೆ ನಿಮಿಷ ನಿಮಿಷಕ್ಕೂ ಹೆಚ್ಚಾಗುತ್ತಿದೆ. ಗಾಳಿಯೂ ಜಾಸ್ತಿಯಾಯಿತು. ಅದರ ಜೊತೆಗೆ ಕರೆಂಟು ಕೂಡ ಹೋಯಿತು. ಊರಿಗೆ ಊರು ಕಗ್ಗತ್ತಲೆ ಆವರಿಸಿತು. ಬುಡ್ಡಿ ದೀಪಗಳು ಮಿಣ ಮಿಣ ಬೆಳಗಲು ಪ್ರಯತ್ನಿಸುತ್ತಿವೆ.

'ಛೀ! ಹಾಳಾದ್ದು ಮಳೆ! ಇಷ್ಟು ದಿನ ಬಿಟ್ಟು ಈ ಹೊತ್ತೇ ಬರ್ಬೇಕ' ಎನ್ನುತ್ತಿದ್ದಾನೆ ಅನಂತರೆಡ್ಡಿ ಒಳಗಡೆ.

'ಷ್ಟ್, ಈ ದಿನ ನಿಂತುಹೋದರೆ ಎರಡು ತಿಂಗಳವರೆಗೆ ಒಳ್ಳೇ ದಿನಗಳು ಇಲ್ಲಂತೆ' ಎನ್ನುತ್ತಿದ್ದಾಳೆ ಸುಶೀಲ. ಭಾರ್ಗವಿ, ರಾಜಶೇಖರನಿಗೆ ಕೇಳುತ್ತಿವೆ ಒಳಗಿನ ಮಾತುಗಳು.

'ಮಳೆಬರ್ಬೇಕು, ಮಳೆಬರ್ಬೇಕು' ಎಂದು ಇಷ್ಟುದಿನ ಪ್ರಾರ್ಥಿಸಿದ ಅನಂತರೆಡ್ಡಿಗೆ ಮಳೆಯ ಮೇಲೆ ಕೆಟ್ಟ ಕೋಪ ಬಂತು.

'ಈ ಹಾಳು ಮಳೆ ಇವಾಗನ್ನ ನಿಂತ್ರೆ ಬೇಸೈತೆ' ಎನ್ನುತ್ತಾ ಪಡಸಾಲಿಗೆ ಬಂದ ಅಳಿಯನ ಹತ್ತಿರ.

ತನ್ನ ಸಲುವಾಗಿ ಮಳೆಯನ್ನು ನಿಲ್ಲು ಎನ್ನುತ್ತಿರುವ ಅಪ್ಪನ ಮಾತುಗಳಿಗೆ ಆಶ್ಚರ್ಯಪಟ್ಟು,